ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ಸಂಖ್ಯೆ:ತುವಿ:ಶೈವಿ:ಪಿಜಿ:2026-27 | 2455 ದಿನಾಂಕ:30.09.2026

**ಅಧಿಸೂಚನೆ**

**ಸ್ನಾತಕೋತ್ತರ ಕೋರ್ಸ್‌ಗಳ ಉಳಿಕೆ ಸೀಟುಗಳ ಪ್ರವೇಶಾತಿ ಕುರಿತು**

ವಿಷಯ: 2026-27ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳ ಉಳಿಕೆ ಸೀಟುಗಳಿಗೆ ಪ್ರವೇಶಾತಿಗಾಗಿ ಅರ್ಜಿಯನ್ನು ಸಲ್ಲಿಸುವ ಕುರಿತು.

ಉಲ್ಲೇಖ:1. ಸಂಖ್ಯೆ:ತುವಿ:ಶೈವಿ:PG-ADM:2026-27/ 1405 ದಿನಾಂಕ:22.07.2026
2. ಸಂಖ್ಯೆ:ತುವಿ:ಶೈವಿ:PG-ADM:2026-27/ 1618 ದಿನಾಂಕ:03.08.2026
3. ಸಂಖ್ಯೆ:ತುವಿ:ಶೈವಿ:ಪಿ.ಜಿ:2026-27/1811 ದಿನಾಂಕ:14.08.2026
4. ಸಂಖ್ಯೆ:ತುವಿ:ಶೈವಿ:ಪಿ.ಜಿ:2026-27/1998 ದಿನಾಂಕ:24.08.2026
5. ಸಂಖ್ಯೆ:ತುವಿ:ಶೈವಿ:ಪಿ.ಜಿ:2026-27/2115 ದಿನಾಂಕ:02.09.2026
6. ಸಂಖ್ಯೆ:ತುವಿ:ಶೈವಿ:ಪಿ.ಜಿ:2026-27/2276 ದಿನಾಂಕ:17.09.2026
7. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:30.09.2026 (ಕಂಡಿಕೆ-105)

*****

ತುಮಕೂರು ವಿಶ್ವವಿದ್ಯಾನಿಲಯದ 2026-27ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರಥಮ ದ್ವಿತೀಯ, ತೃತೀಯ ಮತ್ತು ನಾಲ್ಕನೇ ಹಂತದ ಪ್ರವೇಶ ಪ್ರಕ್ರಿಯೆ ಮುಕ್ತಾಯಗೊಂಡಿದ್ದು, ಕೆಲವು ವಿಭಾಗ/ಕಾಲೇಜುಗಳಲ್ಲಿ ಸೀಟುಗಳು ಉಳಿದಿರುವ ಹಿನ್ನೆಲೆಯಲ್ಲಿ ಅರ್ಹ ಆಸಕ್ತ ವಿದ್ಯಾರ್ಥಿಗಳು **ದಿನಾಂಕ:07.10.2026** ರ ವರೆಗೆ ಅಗತ್ಯ ದಾಖಲೆಗಳೊಂದಿಗೆ ಸಂಬಂಧಪಟ್ಟ ವಿಭಾಗಗಳನ್ನು ಸಂಪರ್ಕಿಸಿ ಅರ್ಜಿಯನ್ನು(**UUCMS OR MANUAL**) ಸಲ್ಲಿಸಿ ಪ್ರವೇಶಾತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಮುಂದುವರೆದು 2026-27ನೇ ಶೈಕ್ಷಣಿಕ ಸಾಲಿನ ದ್ವಿತೀಯ ವರ್ಷದ ವಿವಿಧ ಸ್ನಾತಕೋತ್ತರ ಪದವಿಗಳಿಗೆ ರೂ.1,400/- (ರೂಪಾಯಿ ಒಂದು ಸಾವಿರದ ನಾಲ್ಕು ನೂರು ಮಾತ್ರ)ಗಳ ದಂಡ ಶುಲ್ಕದೊಂದಿಗೆ ಪ್ರವೇಶ ಶುಲ್ಕ ಪಾವತಿಸಿಕೊಳ್ಳಲು ಕೊನೆಯ **ದಿನಾಂಕ:07.10.2026** ಆಗಿರುತ್ತದೆ. ಅದರಂತೆ ಕ್ರಮವಹಿಸುವಂತೆ ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ: ವಿಭಾಗಗಳ ಮುಖ್ಯಸ್ಥರು / ಸಂಯೋಜಕರನ್ನು ಸಂಪರ್ಕಿಸುವುದು.

**ಸೂಚನೆ:1. ಉಲ್ಲೇಖ(01)ರ ಅಧಿಸೂಚನೆಯಲ್ಲಿನ ನಿಬಂಧನೆಗಳು ಹಾಗೂ ಸೂಚನೆಗಳಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ.**

**2. ವಿದ್ಯಾರ್ಥಿಗಳು ಪ್ರವೇಶಾತಿ ಅರ್ಜಿ ಶುಲ್ಕವನ್ನು SB Collect ಮುಖಾಂತರ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರ ಖಾತೆಗೆ ಪಾವತಿಸುವುದು ಹಾಗೂ ಚಲನ್‌ನನ್ನು UUCMS ಗೆ ಅಪ್ಲೋಡ್ ಮಾಡುವುದು. UUCMS ನಲ್ಲಿ pay online ಮೂಲಕ ಅರ್ಜಿ ಶುಲ್ಕ ಪಾವತಿಸುವಂತಿಲ್ಲ.**

**3. ಈಗಾಗಲೇ ಪ್ರಥಮ / ದ್ವಿತೀಯ / ತೃತೀಯ/ನಾಲ್ಕನೇ ಸುತ್ತಿನ ಪ್ರವೇಶಾತಿ ಪ್ರಕ್ರಿಯೆಯಲ್ಲಿ ಅರ್ಜಿ ಸಲ್ಲಿಸಿ ಪ್ರಥಮ / ದ್ವಿತೀಯ ತೃತೀಯ / ನಾಲ್ಕನೇ ಸುತ್ತಿನ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸದ ವಿದ್ಯಾರ್ಥಿಗಳು ಐದನೇ ಸುತ್ತಿಗೆ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆಯಿರುವುದಿಲ್ಲ. ಹಿಂದಿನ ಅರ್ಜಿಯನ್ನು ಐದನೇ ಸುತ್ತಿನ ಕೌನ್ಸಿಲಿಂಗ್‌ಗೆ ಪರಿಗಣಿಸಲಾಗುವುದು.**

**4. Manual ನಲ್ಲಿ ಅರ್ಜಿ ಸಲ್ಲಿಸಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಅರ್ಜಿಗಳನ್ನು ಪ್ರವೇಶ ಪ್ರಕ್ರಿಯೆ ಮುಗಿದ ನಂತರ UUCMS ಗೆ ಅಪ್ಲೋಡ್ ಮಾಡುವುದು.**

**5. ಸದರಿ ಅವಧಿಯೊಳಗೆ ಪ್ರವೇಶ ಪಡೆದ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ರಸೀದಿಗಳನ್ನು UUCMS ನಲ್ಲಿ ಅಪ್ಲೋಡ್ ಮಾಡುವಂತೆ ಕಡ್ಡಾಯವಾಗಿ ವಿದ್ಯಾರ್ಥಿಗಳ ಗಮನಕ್ಕೆ ತರುವುದು.**

ಆದೇಶದ ಮೇರೆಗೆ

30/9/26

ಉಪಕುಲಸಚಿವರು

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. ಅಧ್ಯಕ್ಷರು, ಎಲ್ಲಾ ಸ್ನಾತಕೋತ್ತರ ಪ್ರವೇಶಾತಿ ಸಮಿತಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಮುಖ್ಯಸ್ಥರು / ಸಂಯೋಜಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು: ಸೂಚನೆ (01) ರಿಂದ (05) ರ ವರೆಗಿನ ಅಂಶಗಳನ್ನು ಪರಿಗಣಿಸಿ ಅದರಂತೆ ಕ್ರಮವಹಿಸುವುದು.
3. ಪ್ರಾಂಶುಪಾಲರುಗಳು, ವಿಶ್ವವಿದ್ಯಾನಿಲಯ ಘಟಕ ಮತ್ತು ಸಂಯೋಜಿತ ಸ್ನಾತಕೋತ್ತರ ಪದವಿ ಕಾಲೇಜುಗಳು, ತು.ವಿ.ತು

ಪ್ರತಿಗಳು:

1. ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಡೀನರು ಕಲಾ/ ವಾಣಿಜ್ಯ ಮತ್ತು ನಿರ್ವಹಣೆ/ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯಗಳು, ತು.ವಿ.ತು
4. ಉಪಕುಲಸಚಿವರು, ಪರೀಕ್ಷಾಂಗ /ಸಾಮಾನ್ಯ & ಅಭಿವೃದ್ಧಿ/ ಸಿಬ್ಬಂದಿ/ ಕಾನೂನು ಕೋಶ ವಿಭಾಗಗಳು, ತು.ವಿ.ತು.
5. ಸಿಸ್ಟಮ್ ಅನಾಲಿಸ್ಟ್, ತು.ವಿ.ತು - ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸುವುದು.
6. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಕಚೇರಿ ಪ್ರತಿ.